**ಪ್ರತಿಭಾವಂತರನ್ನು ಹೊಂದಿದ್ದೂ ಕರ್ನಾಟಕ ತಂಡ ರಣಜಿ ಕ್ರಿಕೆಟ್‌ನಲ್ಲಿ ಪದೇ ಪದೇ ಎಡವುತ್ತಿದೆ. ಈ ಬಾರಿಯಂತೂ ಅಂಪೈರ್‌ಗಳ ವಕ್ರದೃಷ್ಟಿಯಿಂದಾಗಿ ಸೆಮಿಫೈನಲ್‌ನಲ್ಲಿ ಸೋಲಬೇಕಾಯಿತು. ಈ ಸೋಲಿನ ಕಹಿಯನ್ನು ಸೈಯದ್ ಮುಷ್ತಾಕ್ ಆಲಿ ಟ್ರೋಫಿಯಲ್ಲಿನ ಗೆಲುವು ಮರೆಸುವಂತಿದೆ. ಚಾಂಪಿಯನ್ ಪಟ್ಟದೊಂದಿಗೆ ಯುವ ಹೀರೊಗಳು ಕೂಡ ಹುಟ್ಟಿಕೊಂಡಿದ್ದಾರೆ.**

ರಣಜಿ ಕ್ರಿಕೆಟ್‌ನಲ್ಲಿ ಆಟಗಾರರು ತೋರುವ ನಿರ್ವಹಣೆಯ ಆಧಾರದ ಮೇಲೆ ರಾಷ್ಟ್ರೀಯ ಕ್ರಿಕೆಟ್‌ನಲ್ಲಿ ಅವರಿಗೆ ಪ್ರಾಶಸ್ತ್ಯ ಸಿಗುವುದು ಸಹಜ. ಅದೇ ರೀತಿ ಇರಾನಿ ಟ್ರೋಫಿ, ವಿಜಯ್ ಹಜಾರೆ ಟ್ರೋಫಿ, ಸೈಯದ್ ಮುಷ್ತಾಕ್ ಆಲಿ ಟ್ರೋಫಿಯಲ್ಲಿ ಕ್ರಿಕೆಟ್ ಆಟಗಾರರು ತೋರುವ ಸಾಧನೆಗಳು ವಿಶೇಷವಾಗಿ ಏಕದಿನ ಮತ್ತು ಟಿ–20 ಕ್ರಿಕೆಟ್‌ನಲ್ಲಿ ಭಾರತ ತಂಡದ ಆಯ್ಕೆ ಮಾಡುವಾಗ ಪ್ರಮುಖ ಪಾತ್ರ ವಹಿಸುತ್ತವೆ. ಹಾಗಾಗಿಯೇ ಈ ಎಲ್ಲ ಟ್ರೋಫಿಗಳು ವರುಷದಿಂದ ವರುಷಕ್ಕೆ ತಮ್ಮ ಮಹತ್ವವನ್ನು ಹೆಚ್ಚಿಸಿಕೊಳ್ಳುತ್ತಲೇ ಇವೆ.

ಈ ಬಾರಿಯ ರಣಜಿ ಟ್ರೋಫಿಯಲ್ಲಿ ನಮ್ಮ ಕರ್ನಾಟಕ ರಾಜ್ಯ ತಂಡವು ಅಂಪೈರ್ ವಿವಾದಾತ್ಮಕ ತೀರ್ಪುಗಳಿಂದ ಸೆಮಿಫೈನಲ್ ಪಂದ್ಯದಲ್ಲಿ ಸೌರಾಷ್ಟ್ರ ತಂಡದೆದುರು 5 ವಿಕೆಟ್‌ಗಳಿಂದ ಸೋತು ಫೈನಲ್‌ಗೇರುವಲ್ಲಿ ವಿಫಲವಾಗಿದ್ದು ನಾಡಿನ ಕ್ರಿಕೆಟ್ ಪ್ರಿಯರಲ್ಲಿ ನಿರಾಸೆ ಮೂಡಿಸಿತ್ತು. ಆದರೆ ಈ ನಿರಾಸೆಯ ಕಾರ್ಮೋಡವನ್ನು ನಿವಾರಿಸುವಂತೆ ಇತ್ತೀಚೆಗೆ ನಡೆದ ಸೈಯದ್ ಮುಷ್ತಾಕ್ ಆಲಿ ಟ್ರೋಫಿ ಟಿ–20 ಚುಟುಕು ಕ್ರಿಕೆಟ್ ಪಂದ್ಯಾವಳಿಯಲ್ಲಿ ಮನೀಶ್ ಪಾಂಡೆ ನೇತೃತ್ವದ ಕರ್ನಾಟಕ ಅದ್ಭುತವಾದ ಪಾರಮ್ಯ ಮೆರೆದಇದೆ. ಇದೇ ಮೊದಲ ಬಾರಿಗೆ ಸೈಯದ್ ಮುಷ್ತಾಕ್ ಆಲಿ ಟ್ರೋಫಿಯ ಫೈನಲ್‌ನ್ನು ಪ್ರವೇಶಿಸಿದ್ದ ಕರ್ನಾಟಕದ ತಂಡ ಪ್ರಶಸ್ತಿಯನ್ನು ಜಯಿಸಿದೆ. ಪಂದ್ಯಾವಳಿಯುದ್ದಕ್ಕೂ ಅಜೇಯವಾಗಿ ಉಳಿದದ್ದು ತಂಡದ ವಿಶೇಷ ಸಾಧನೆ.

## ಸೈಯದ್ ಮುಷ್ತಾಕ್ ಆಲಿ ಟ್ರೋಫಿಯ ಇತಿಹಾಸ

ದೇಸಿ ಕ್ರಿಕೆಟ್‌ನಲ್ಲಿ ಟಿ–20 ಪಂದ್ಯಾವಳಿ ದೊಡ್ಡ ಮಟ್ಟದಲ್ಲಿ ಆರಂಭವಾಗಿದ್ದು 2006–2007ರಲ್ಲಿ. ರಣಜಿ ತಂಡಗಳ ನಡುವೆ ಅಂತರರಾಜ್ಯ ಟಿ–20 ಕ್ರಿಕೆಟ್ ಟೂರ್ನಿ ಹೆಸರಿನಲ್ಲಿ ಆರಂಭವಾದ ಈ ಪಂದ್ಯಾವಳಿ ಮೊದಲ ಬಾರಿ ನಡೆದಾಗ ಫೈನಲ್‌ನಲ್ಲಿ ಪಂಜಾಬ್ ತಂಡವನ್ನು ಸೋಲಿಸಿ ತಮಿಳುನಾಡು ತಂಡ ಪ್ರಶಸ್ತಿ ಪಡೆದಿತ್ತು. 2008 ಮತ್ತು 2009ರಲ್ಲಿ ಈ ಪಂದ್ಯಾವಳಿ ನಡೆದಿರಲಿಲ್ಲ. ಆ ಬಳಿಕ ಈ ಟೂರ್ನಿಗೆ ಖ್ಯಾತ ಭಾರತೀಯ ಕ್ರಿಕೆಟ್ ಆಟಗಾರ ಸೈಯದ್ ಮುಷ್ತಾಕ್ ಆಲಿ ಟ್ರೋಫಿ ಎಂದು ಹೆಸರಿಡಲಾಯಿತು. ನಂತರ 2009–2010ರಲ್ಲಿ ಹೈದರಾಬಾದ್ ತಂಡವನ್ನು ಸೋಲಿಸಿ ಮಹಾರಾಷ್ಟ್ರ ಚಾಂಪಿಯನ್ ಪಟ್ಟ ಗಳಿಸಿತ್ತು. ನಂತರದ ಅವಧಿಗಳಲ್ಲಿ ಬಂಗಾಳ, ಬರೋಡ, ಗುಜರಾತ್, ಬರೋಡ, ಗುಜರಾತ್, ಉತ್ತರ ಪ್ರದೇಶ, ಪೂರ್ವ ವಲಯ, ದೆಹಲಿ ತಂಡಗಳು ಕ್ರಮವಾಗಿ ಪ್ರಶಸ್ತಿ ಜಯಿಸಿದ್ದವು.



ಕಳೆದ ಒಂಬತ್ತು ವರುಷಗಳಲ್ಲಿ ಕನಿಷ್ಠ ಫೈನಲ್ ಹಂತಕ್ಕೇರಲೂ ವಿಫಲವಾಗಿದ್ದ ಕರ್ನಾಟಕ ಈ ಬಾರಿ ಮಾತ್ರ ಛಲ ಬಿಡದ ತ್ರಿವಿಕ್ರಮನಂತೆ ಯುವಶಕ್ತಿಯ ಅದ್ಭುತ ಪ್ರದರ್ಶನದ ನೆರವಿನೊಂದಿಗೆ ಅಜೇಯವಾಗಿ, ಅರ್ಹವಾಗಿ ಟ್ರೋಫಿಯನ್ನು ತನ್ನದಾಗಿಸಿಕೊಂಡಿದೆ. ಲೀಗ್ ಹಂತದ ಏಳು ಪಂದ್ಯಗಳು ಮತ್ತು ಸೂಪರ್‌ಲೀಗ್ ಹಂತದಲ್ಲಿ ಮುಂಬೈ, ಉತ್ತರ ಪ್ರದೇಶ, ದೆಹಲಿ ತಂಡಗಳ ವಿರುದ್ಧದ ಗೆಲುವುಗಳು ಸೇರಿದಂತೆ ಸತತ ಹತ್ತು ಗೆಲುವುಗಳನ್ನು ದಾಖಲಿಸಿದ್ದ ಕರ್ನಾಟಕಕ್ಕೆ, ಕೊನೆಯ ಪಂದ್ಯದಲ್ಲಿ ಹಾಲಿ ರಣಜಿ ಮತ್ತು ಇರಾನಿ ಟ್ರೋಫಿ ಚಾಂಪಿಯನ್ ವಿದರ್ಭ ಎದುರಾಗಿತ್ತು. ಅದನ್ನು ಸೋಲಿಸಿ ರಣಜಿ ಸೋಲಿನ ಸೇಡನ್ನು ತೀರಿಸಿಕೊಂಡದ್ದು ಮಾತ್ರವಲ್ಲದೆ ಮತ್ತಷ್ಟು ಹೆಚ್ಚೇ ಆತ್ಮವಿಶ್ವಾಸದಿಂದ ಕರ್ನಾಟಕ ಫೈನಲ್‌ಗೆ ಲಗ್ಗೆಯಿಟ್ಟಿತ್ತು.

ಮಾರ್ಚ್ 14ರಂದು ಇಂದೋರ್‌ನ ಹೋಳ್ಕರ್ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ 'ಎ' ಗುಂಪಿನಲ್ಲಿ ಅಗ್ರಸ್ಥಾನ ಪಡೆದು ಫೈನಲಿಗೇರಿದ ಸಾಧನೆ ಮಾಡಿದ್ದ ಬಲಿಷ್ಠ ಮಹಾರಾಷ್ಟ್ರ ತಂಡವನ್ನು 8 ವಿಕೆಟ್ ಅಂತರದಿಂದ ಭರ್ಜರಿಯಾಗಿ ಸೋಲಿಸಿದ ಕರ್ನಾಟಕ ಒಂದೂ ಪಂದ್ಯವನ್ನು ಸೋಲದೆ ಅಜೇಯವಾಗಿ ಪ್ರಶಸ್ತಿ ಗೆದ್ದ ಮೊದಲ ತಂಡವೆಂಬ ಇತಿಹಾಸವನ್ನು ಬರೆಯಿತು.

ಒಟ್ಟಾರೆ 37 ತಂಡಗಳು ಈ ಬಾರಿ ಆಡಿದ್ದವು. ಕರ್ನಾಟಕದ ಗೆಲುವಿನಲ್ಲಿ ಪ್ರಮುಖವಾಗಿ ಕಂಡಿದ್ದು ಯುವ ಪ್ರತಿಭೆಗಳ ಸಾಂಘಿಕ ಮತ್ತು ಆತ್ಮವಿಶ್ವಾಸದ ಪ್ರದರ್ಶನ. ಆಡಿದ 12 ಪಂದ್ಯಗಳಲ್ಲಿ 53.6ರ ಸರಾಸರಿಯಲ್ಲಿ 5 ಅರ್ಧಶತಕಗಳು ಸೇರಿದಂತೆ ಒಟ್ಟು 536 ರನ್ ಗಳಿಸಿ, ಈ ಬಾರಿಯ ಪಂದ್ಯಾವಳಿಯಲ್ಲಿ ಅತ್ಯಧಿಕ ರನ್ ಗಳಿಸಿದ ಬ್ಯಾಟ್ಸ್‌ಮನ್ (500ಕ್ಕಿಂತ ಹೆಚ್ಚು ರನ್ ಗಳಿಸಿದ ಏಕೈಕ ಬ್ಯಾಟ್ಸ್ ಮನ್ ಕೂಡ) ಎನ್ನುವ ಶ್ರೇಯಸ್ಸಿಗೆ ಬೆಳಗಾವಿಯ ರೋಹನ್ ಕದಂ ಪಾತ್ರರಾದರು. ಫೈನಲ್‌ನಲ್ಲೂ ರೋಹನ್ 39 ಎಸೆತಗಳಲ್ಲಿ 60 ರನ್ ಚಚ್ಚಿದ್ದು ವಿಶೇಷ.

ಮನೀಶ್ ಪಾಂಡೆ , ಮಯಾಂಕ್ ಅಗರ್ವಾಲ್, ಕರುಣ್ ನಾಯರ್, ಅಭಿಮನ್ಯು ಮಿಥುನ್, ಆರ್. ವಿನಯ್ ಕುಮಾರ್ ಅವರಂತಹ ಅನುಭವಿಗಳ ಜೊತೆಗೆ 17 ವಿಕೆಟ್ ಪಡೆದ ವಿ. ಕೌಶಿಕ್, ಮನೋಜ್ ಬಾಂಡಗೆ, ಕೆ.ಸಿ ಕಾರಿಯಪ್ಪರಂತಹ ಹೊಸ ಮುಖಗಳ ಪ್ರದರ್ಶನ ಗಮನ ಸೆಳೆಯುವಂತಿತ್ತು. ಉಳಿದಂತೆ ಬಿ.ಆರ್. ಶರತ್, ಕೆ.ವಿ. ಸಿದ್ಧಾರ್ಥ್, ಶ್ರೇಯಸ್ ಗೋಪಾಲ್, ಪ್ರಸಿದ್ಧ ಕೃಷ್ಣ, ಜೆ. ಸುಚಿತ್ , ಲುವನೀತ್ ಸಿಸೋಡಿಯಾ ಸೇರಿದಂತೆ ತಂಡದ ಎಲ್ಲರಿಗೂ ಗೆಲುವಿನ ಅಭಿನಂದನೆಗಳು ಸಲ್ಲಬೇಕಿದೆ.

ಈ ಗೆಲುವು ವಿಶೇಷವಾಗಿ ಚುಟುಕು ಕ್ರಿಕೆಟ್‌ನಲ್ಲಿ ಕರ್ನಾಟಕದ ಪಾಲಿಗೆ ಹೊಸ ಭರವಸೆಗಳನ್ನು ಬಿತ್ತಿದೆ. ತಂಡದ ಹಲವರ ಪಾಲಿಗೆ ಐಪಿಎಲ್‌ನಲ್ಲಿ ಸಾಧನೆಗಳನ್ನು ಮೆರೆಯಲು ಸಹಾಯಕವಾಗಲಿದೆ. ಟೂರ್ನಿಯಲ್ಲಿ ಮುಂಬೈ ಪರವಾಗಿ ಆಡಿದ ಶ್ರೇಯಸ್ ಅಯ್ಯರ್ ಸಿಕ್ಕಿಂ ಎದುರು 55 ಎಸೆತಗಳಲ್ಲಿ 147 ರನ್ ಬಾರಿಸಿದ್ದು ವಿಶೇಷವಾಗಿ ಗಮನ ಸೆಳೆಯಿತು.

ಕಳೆದ ಬಾರಿಯ ಸೈಯದ್ ಮುಷ್ತಾಕ್ ಆಲಿ ಟ್ರೋಫಿಯ ಸೀಸನ್ನಿನ ಸೂಪರ್ ಲೀಗ್‌ನಲ್ಲಿ ಕೊನೆಯ ಎರಡು ಪಂದ್ಯಗಳನ್ನು ಗೆದ್ದಿದ್ದ ಕರ್ನಾಟಕ, ಈ ಬಾರಿ 12 ಅಜೇಯ ಗೆಲುವುಗಳ ದಾಖಲೆ ಬರೆಯುವುದ ಮೂಲಕ ಒಟ್ಟು 14 ಪಂದ್ಯಗಳನ್ನು ಸತತವಾಗಿ ಗೆದ್ದ ಶ್ರೇಯಸ್ಸನ್ನು ಮುಡಿಗೇರಿಸಿಕೊಂಡಿದೆ.